ರಾಜ್ಯದಲ್ಲಿ ಒಳಚರಂಡಿ ಮಂಡಳಿಯ ಯೋಜನೆಗಳು.

3421(4423) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ರಾಜ್ಯದಲ್ಲಿ ತೆಗೆದುಕೊಂಡಿರುವ ವಿವಿಧ ಯೋಜನೆಗಳ ಸಂಖ್ಯೆ ಎಷ್ಟು? ಅವು ಯಾವುವು?

ಆ) ಯಾವ ಯಾವ ತಾಲ್ಲೂಕುಗಳಲ್ಲಿ ಈ ಯೋಜನೆಗಳನ್ನು ತೆಗೆದು ಕೊಳ್ಳಲಾಗಿದೆ.

ಇ) ಎಷ್ಟು ಯೋಜನೆಗಳು ಅಪೂರ್ಣಗೊಂಡಿವೆ? ಎಷ್ಟು ವರ್ಷಗಳಿಂದ ಬಾಕಿ ಉಳಿದಿದೆ.

ಈ) ಈ ಯೋಜನೆಗಳನ್ನು ಮುಗಿಸಲು ಬೇಕಾಗುವ ಹಣ ಎಷ್ಟು?

ಉ) ಈ ಯೋಜನೆಗಳನ್ನು ಎಂದು ಮುಗಿಸಲಾಗುವುದು? (ವಿವರಗಳನ್ನು ಕೊಡುವುದು)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ರಾಜ್ಯದಲ್ಲಿ ಹಾಲಿ 62 ಯೋಜನೆಗಳನ್ನು ಕೈಗೊಂಡಿದ್ದು, ಯೋಜನೆಗಳು ಪ್ರಗತಿಯಲ್ಲಿವೆ.

1. ಕೊಳವೆ ನೀರು ಸರಬರಾಜು ಯೋಜನೆ	-20
2. ನಗರ ನೀರು ಸರಬರಾಜು ಯೋಜನೆ	-37
3. ಒಳಚರಂಡಿ ಯೋಜನೆ	-5

ಆ) ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಲಾಗಿದೆ. (ಅನುಬಂಧ-1)

ಇ) 5 ನೀರು ಸರಬರಾಜು ಯೋಜನೆಗಳು ಕಳೆದ 5-6 ವರ್ಷಗಳಿಂದ ಅನುಷ್ಠಾನದಲ್ಲಿರುತ್ತವೆ.

1. ಕೊಳವೆ ನೀರು ಸರಬರಾಜು ಯೋಜನೆ: — 1. ಮಾಗಡಿ.

2. ನಗರ ನೀರು ಸರಬರಾಜು ಯೋಜನೆ:

1. ಗುಂಡ್ಲುಪೇಟೆ
2. ಮಡಿಕೇರಿ
3 ಮಳವಳ್ಳಿ
2. ಬೀದರ್

ಈ) ಈ ಯೋಜನೆಗಳನ್ನು ಪೂರ್ಣಗೊಳಿಸಲು ರೂ. 1956.66 ಲಕ್ಷಗಳು ಬೇಕಾಗಿರುತ್ತದೆ.

ಉ) ಈ ಯೋಜನೆಗಳನ್ನು 2000-01ನೇ ಸಾಲಿನಲ್ಲಿ ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ.

ಅನುಬಂಧ - 1

ಮುಂದುವರಿದ ಯೋಜನೆಗಳು

ಅ.	ಕೊಳವೆ ನೀರು ಸರಬರಾಜು ಯೋಜನೆ	ಆ.	ನಗರ ನೀರು ಸರಬರಾಜು ಯೋಜನೆ		
೧.	ಮಾಗಡಿ	೧.	ಶಿಕಾರಿಪುರ	೧೯.	ಕೆ.ಆರ್ ನಗರ
೨.	ಕುಶಾಲನಗರ	೨.	ಚಳ್ಳಕೆರೆ	೨೦.	ಚಿಕ್ಕಮಗಳೂರು
೩.	ಕುಷ್ಟಗಿ	೩.	ಚಿಕ್ಕಬಳ್ಳಾಪುರ	೨೧.	ಕಂಪ್ಲಿ
೪.	ಪಾನಾಪುರ	೪.	ಗುಂಡ್ಲುಪೇಟೆ	೨೨.	ಬಸವಕಲ್ಯಾಣ
೫.	ಮುಳಗುಂದ	೫.	ಮಡಕೇರಿ	೨೩.	ರಾಯಚೂರು
೬.	ಬ್ಯಾಡಗಿ	೬.	ಮಂಡ್ಯ ೨ನೇ ಹಂತ	೨೪.	ರಾಮದುರ್ಗ
೭.	ಪಿರಿಯಾಪಟ್ಟಣ	೭.	ಮಳವಳ್ಳಿ	೨೫.	ಕುಡಚಿ
೮.	ಟಿ.ನರಸೀಪುರ	೮.	ಕಮಲಾಪುರ	೨೬.	ಮೂಡಲಗಿ
೯.	ಶೃಂಗೇರಿ	೯.	ಶಿರಗುಪ್ಪ	೨೭.	ತಾಳಿಕೋಟೆ
೧೦.	ಆಲೂರು	೧೦.	ಬೀದರ್	೨೮.	ಬಸವನಬಾಗೇವಾಡಿ
೧೧.	ಮೂಡಬಿದ್ರೆ	೧೧.	ಶೋರಾಪುರ	೨೯.	ಅಣ್ಣಿಗೆರೆ
೧೨.	ನಾಗಮಂಗಲ	೧೨.	ರಬಕವಿಬನಹಟ್ಟಿ	೩೦.	ಹಾವೇರಿ
೧೩.	ಕೊನ್ನೂರು	೧೩.	ರಾಣೆಬೆನ್ನೂರು	೩೧.	ಆನೇಕಲ್
೧೪.	ಬೀಳಗಿ	೧೪.	ದಾವಣಗೆರೆ	೩೨.	ಮದ್ದೂರು
೧೫.	ಬಾದಾಮಿ	೧೫.	ಹರಿಹರ	೩೩.	ತರೀಕೆರೆ
೧೬.	ನವಲಗುಂದ	೧೬.	ಹರಪನಹಳ್ಳಿ	೩೪.	ಆಳಂದ
೧೭.	ಚಿಕ್ಕನಾಯಕನಹಳ್ಳಿ	೧೭.	ಶಿರಾ	೩೫.	ಸಿಂದಗಿ
೧೮.	ತಲಘಟ್ಟಗಿ	೧೮.	ಭದ್ರಾವತಿ	೩೬.	ಬಳ್ಳಾರಿ
೧೯.	ತುರುವೇಕೆರೆ			೩೭.	ಲಿಂಗಸುಗೂರು

ಒಳಚರಂಡಿ ಯೋಜನೆ

೧. ಹಾಸನ
೨. ಹೊಳೆನರಸೀಪುರ
೩. ಗುಲ್ಬರ್ಗ ೨ನೇ ಹಂತ
೪. ಶಿಡ್ಲಘಟ್ಟ
೫. ಬಳ್ಳಾರಿ

(ಅನುಬಂಧ-೨)

ಕ್ರಮ ಸಂಖ್ಯೆ	ಯೋಜನೆಗಳು	ಪೂರ್ಣಗೊಳಿಸಲು ಬೇಕಾಗಿರುವ ಮೊತ್ತ	ಚಾಲ್ತಿಗೊಳಿಸಲು ಉದ್ದೇಶಿಸಿರುವ ದಿನಾಂಕ
ಅ.	ಕೊಳವೆ ನೀರು ಸರಬರಾಜು ಯೋಜನೆ		
೧.	ಮಾಗಡಿ	51.50 ಲಕ್ಷಗಳು	3/2001
ಆ.	ನಗರ ನೀರು ಸರಬರಾಜು ಯೋಜನೆ		
1.	ಗುಂಡ್ಲುಪೇಟೆ	379.10 ಲಕ್ಷಗಳು	3/2001
2.	ಮಡಕೇರಿ	148.20 ಲಕ್ಷಗಳು	3/2001
3.	ಮಳವಳ್ಳಿ	259.60 ಲಕ್ಷಗಳು	3/2001
4.	ಬೀದರ್	1118.26 ಲಕ್ಷಗಳು	3/2001
	ಒಟ್ಟು	1956.66 ಲಕ್ಷಗಳು	

ಗಂಗಾ ಕಲ್ಯಾಣ ಯೋಜನೆ.

3423(4502) ಶ್ರೀ ಶಿವರಾಮು ಬಿ. (ಗಂಡಸಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಯ ಗುರಿಯೆಷ್ಟು ; (ಪರಿಶಿಷ್ಟ ಜಾತಿ ವರ್ಗದ ಮತ್ತು ಹಿಂದುಳಿದ ವರ್ಗದ ನಿಗಮ ಸೇರಿ)

ಆ) ಇವುಗಳ ಕ್ಷೇತ್ರವಾರು ಹಂಚಿಕೆಯಾಗಿರುತ್ತದೆಯೆ ;

ಇ) ಹಂಚಿಕೆಗೆ ಅಳವಡಿಸಿಕೊಂಡಿರುವ ಮಾನದಂಡವಾದರೂ ಏನು ;

ಈ) ಬರಪೀಡಿತ ಪ್ರದೇಶಗಳಿಗೆ ಮತ್ತು ನೀರು ಲಭ್ಯವಿರುವ ಪ್ರದೇಶಗಳಿಗೆ ಆದ್ಯತೆ ಕೊಡುವ ಚಿಂತನೆ ಏನಾದರೂ ಇರುತ್ತದೆಯೇ ಮತ್ತು ಹೆಚ್ಚು ಬಾವಿಗಳನ್ನು ವಿಶೇಷವಾಗಿ ಒದಗಿಸಲಾಗುತ್ತಿದೆಯೇ?